ಸಂಪುಟ : 1 ಸಂಚಿಕೆ : 2 ಪುಟ : 4 ಜುಲೈ 2017
* ಆಂತರಿಕ ಪ್ರಸರಣಕ್ಕೆ ಮಾತ್ರ

ಅರಿವು ಶಾಲೆಯ ಮಾಸ ಪತ್ರಿಕೆ

# ಅಂಗಳ

## ಮಾಹಿತಿ, ಜ್ಞಾನ, ಸೃಜನಶೀಲತೆಗೊಂದು ವೇದಿಕೆ

www.arivu.org | e-mail: info@arivu.org

ಸಂಪಾದಕರು: ಡಾ.ಎಂ.ಸಿ.ಮನೋಹರ ಸಂಚಿಕೆ ಸಂಪಾದಕರು: ಕಿರಣ್‌ಕುಮಾರ್ ಎಸ್.ಕೆ.ಗಿರ್ಗಿ





**ನಾಟಕಗಳಲ್ಲಿ ಅಭಿನಯಿಸುವುದಕ್ಕೆ ನಮ್ಮ ಶಾಲೆಯಲ್ಲಿ ಮಕ್ಕಳಿಗೆ ಕೊರತೆಯೇನೂ ಇಲ್ಲ. ಆದರೆ ವಸ್ತ್ರಾಲಂಕಾರ, ಪ್ರಸಾಧನ, ಧ್ವನಿ ಮತ್ತು ಬೆಳಕು ಸೇರಿದಂತೆ ಪೂರ್ಣ ಪ್ರಮಾಣದ ರಂಗ ಸಜ್ಜಿಕೆಯೊಂದಿಗೆ ಹಾಗೂ ಸಾರ್ವಜನಿಕ ಸ್ಥಳದಲ್ಲಿ ನಾಟಕ ಪ್ರದರ್ಶನ ಮಾಡಿದ್ದು ಇದೇ ಮೊದಲು. ಆದ್ದರಿಂದ ಪ್ರದರ್ಶನದ ಬಗ್ಗೆ ಎಲ್ಲರಿಗೂ ಕುತೂಹಲವಿತ್ತು.**

# ಅರರೇ... ಎನಿತು ಚಂದ ಈ ಬಾಲರ ನಟನೆ!

ಶಾಲಾ ಪರಿಸರದಿಂದ ಹೊರಗೆ, ಸಾರ್ವಜನಿಕ ರಂಗ ಸ್ಥಳದಲ್ಲಿ ನಮ್ಮ ಶಾಲೆಯ ಮಕ್ಕಳಿಂದ ಪರಿಪೂರ್ಣ ನಾಟಕ ಪ್ರದರ್ಶನವೊಂದನ್ನು ಏರ್ಪಡಿಸಬೇಕು ಎಂಬ ಒತ್ತಾಸೆ ಪೋಷಕರ ವಲಯದಿಂದ ಆಗಾಗ್ಗೆ ಕೇಳಿ ಬರುತ್ತಿತ್ತು. ಅದರ ಫಲವೇ ಜುಲೈ 14 ರಂದು ಮೈಸೂರಿನ ಕಲಾಮಂದಿರದಲ್ಲಿ ಜರುಗಿದ 'ಶ್ರೀಕೃಷ್ಣಗಾರುಡಿ' ಮತ್ತು 'ಅಗಲಗಿವಿಯ ಅರಿವುಗಾರ' ನಾಟಕಗಳ ಪ್ರದರ್ಶನ.

ಹೌದು, ನಾಟಕಗಳಲ್ಲಿ ಅಭಿನಯಿಸುವುದಕ್ಕೆ ನಮ್ಮ ಶಾಲೆಯಲ್ಲಿ ಮಕ್ಕಳಿಗೆ ಕೊರತೆಯೇನೂ ಇಲ್ಲ. ಹಲವಾರು ಸಂದರ್ಭಗಳನ್ನು ಬಳಸಿಕೊಂಡು ಶಾಲೆಯಲ್ಲಿ ನಾಟಕಗಳನ್ನು ಮಾಡುತ್ತಲೇ ಇರುತ್ತಾರೆ. ಆದರೆ ವಸ್ತ್ರಾಲಂಕಾರ, ಪ್ರಸಾಧನ, ಧ್ವನಿ ಮತ್ತು ಬೆಳಕು ಸೇರಿದಂತೆ ಪೂರ್ಣ ಪ್ರಮಾಣದ ರಂಗ ಸಜ್ಜಿಕೆಯೊಂದಿಗೆ ಹಾಗೂ ಸಾರ್ವಜನಿಕ ಸ್ಥಳದಲ್ಲಿ ನಾಟಕ ಪ್ರದರ್ಶನ ಮಾಡಿದ್ದು ಇದೇ ಮೊದಲು. ಆದ್ದರಿಂದ ಪ್ರದರ್ಶನದ ಬಗ್ಗೆ ಎಲ್ಲರಿಗೂ ಕುತೂಹಲವಿತ್ತು. ಅದನ್ನು ನಮ್ಮ ಮಕ್ಕಳು ನಿರೀಕ್ಷೆಗೂ ಮೀರಿ ಯಶಸ್ವುಗೊಳಿಸಿದರು ಎಂಬುದನ್ನು ನಾವು ಹೇಳುವುದಲ್ಲ, ನಾಟಕವನ್ನು ವಿಮರ್ಶೆ ಮಾಡಿರುವ ಪತ್ರಕರ್ತರೇ ಹೇಳಿದ್ದಾರೆ.

1 ರಿಂದ 6ನೇ ತರಗತಿವರೆಗಿನ ಮಕ್ಕಳು ಅಭಿನಯಿಸಿದ 'ಶ್ರೀಕೃಷ್ಣಗಾರುಡಿ' ನಾಟಕ ಹೇಗಿತ್ತು ಎಂಬುದರ ಬಗ್ಗೆ ಜುಲೈ 22ರ 'ಪ್ರಜಾವಾಣಿ' ಪತ್ರಿಕೆಯಲ್ಲಿ ಹಿರಿಯ ಪತ್ರಕರ್ತರೂ, ವಿಮರ್ಶಕರೂ ಆಗಿರುವ ಅಕ್ಕಿಹೆಬ್ಬಾಳು ನಾಗರಾಜ್ ಅವರು ಬರೆದಿರುವ ಕೆಲವು ಸಾಲುಗಳನ್ನು ಇಲ್ಲಿ ನೀಡಲಾಗಿದೆ.

'ಈ ನಾಟಕದಲ್ಲಿ ಭಾಗವಹಿಸಿದ್ದ ಮಕ್ಕಳೆಲ್ಲರೂ ಹುಬ್ಬೇರಿಸುವಂತೆ ಅಭಿನಯಿಸಿದರು. ಪೌರಾಣಿಕ ನಾಟಕಕ್ಕೆ ಪೂರಕವಾದ ಸಂಭಾಷಣೆ, ಗತ್ತುಗಾರಿಕೆ, ಭಾವಪೂರ್ಣವಾದ ನಟನೆ ಅರರೇ ಎನ್ನುವಂತಿತು. ಅಭಿನಯದ ಪಕ್ವತೆಯ ಕಾರಣದಿಂದ ಪ್ರೇಕ್ಷಕರ ಮೆಚ್ಚುಗೆ ಗಳಿಸಿದರು. ಹಾಡುಗಳನ್ನಂತೂ ಮತ್ತೊಮ್ಮೆ ಕೇಳುವಂತೆ ಸುಶ್ರಾವ್ಯವಾಗಿ ಸಂಗೀತಮಯ ಧಾಟಿಯಲ್ಲಿ ಹಾಡಿದ್ದು ಮೆಚ್ಚುಗೆಗೆ ಪಾತ್ರವಾಯಿತು.

ನಿರ್ದೇಶಕರು ಔಚಿತ್ಯಪೂರ್ಣ ಹೆಜ್ಜೆ ಇಟ್ಟಿದ್ದಾರೆ. ಕೃಷ್ಣನ ಪಾತ್ರಧಾರಿಯ ಮಾತಂತೂ ಸೊಗಸು. ಎನಿತು ಚಂದ ಈ ಬಾಲಕಿಯ ನಟನೆ ಎನಿಸಿತು. ಪ್ರೇಕ್ಷಕರಂತೂ ಖುಲ್‌ಖುಷ್. ಈ ಎಲ್ಲ ದೃಶ್ಯಗಳ ನಡುವೆ, ಹಾಸ್ಯದ ಹೊನಲು ನಿರಂತರವಾಗಿ ಹರಿದು ಪ್ರೇಕ್ಷಕರನ್ನು ಆಚೀಚೆ ಚಿತ್ತ ಹರಿಸದಂತೆ ಲವಲವಿಕೆಯಿಂದ ವೇದಿಕೆಯತ್ತ ಸೆಳೆದದ್ದು ಮಕ್ಕಳ ಅಭಿನಯದ ಹೆಗ್ಗಳಿಕೆ...'





### ಪುಸಕಕ್ಕೆ ಸೀಮಿತವಾದರೆ ಜಾನಪದಕ್ಕೆ ಸೋಲು

ನಾಟಕಗಳ ಪ್ರದರ್ಶನದ ನಡುವೆ, 'ಕೋಟಿಚೆನ್ನಯ್ಯ–ಕಾಲಾತೀತ ಕಾಲ ಪುರುಷರು' ಸಾಕ್ಷ್ಯಚಿತ್ರ ಹಾಗೂ 'ಅಂಗಳ' ಅರಿವು ಶಾಲೆ ಮಾಸಪತ್ರಿಕೆಯ ಮೊದಲ ಸಂಚಿಕೆ ಬಿಡುಗಡೆ ಕಾರ್ಯಕ್ರಮ ಜರುಗಿತು. ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಪ್ರೊ.ಎಸ್.ಜಿ.ಸಿದ್ದರಾಮಯ್ಯ ಅವರು ಸಾಕ್ಷ್ಯಚಿತ್ರ ಬಿಡುಗಡೆ ಮಾಡಿ ಮಾತನಾಡಿದರು. ಅರಿವು ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಟ್ರಸ್ಟ್ ಈ ಹಿಂದೆಯೇ ಬಿಡುಗಡೆ ಮಾಡಿರುವ 'ಮಾತಿನ ಮಹಾಕಾವ್ಯ' ಸಾಕ್ಷ್ಯಚಿತ್ರ ಅದ್ಭುತವಾಗಿ ಮೂಡಿಬಂದಿದ್ದು ಅಂತೆಯೆ, 'ಕೋಟಿ ಚೆನ್ನಯ್ಯ' ಸಾಕ್ಷ್ಯಚಿತ್ರವೂ ಉತ್ತಮವಾಗಿ ತಯಾರಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಮುಖ್ಯಅತಿಥಿಯಾಗಿದ್ದ ಜಾನಪದ ವಿದ್ವಾಂಸರಾದ ಡಾ.ಕೃಷ್ಣಮೂರ್ತಿ ಹನೂರು ಅವರು ಮಾತನಾಡಿ, ಜಾನಪದವನ್ನು ಬರವಣಿಗೆಯಲ್ಲಿ ಹಿಡಿದಿಡಬಹುದು ಎಂಬ ನಂಬಿಕೆ ಹುಸಿಯಾಗಿದೆ. ಬರವಣಿಗೆಗೆ ಸೀಮಿತವಾದರೆ ಜಾನಪದ ಸೋಲುತ್ತದೆ. ಆದ್ದರಿಂದ ಜಾನಪದವನ್ನು ದೃಶ್ಯ–ಶ್ರವಣ ಮಾಧ್ಯಮಕ್ಕೆ ಅಳವಡಿಸುವ ಅರಿವು ಬಳಗದ ಪ್ರಯತ್ನ ಶ್ಲಾಘನೀಯ ಮತ್ತು ಸಫಲತೆ ಕಂಡಿದೆ ಎಂದು ಅಭಿಪ್ರಾಯಪಟ್ಟರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ಡಾ.ಹನೂರು ಚನ್ನಪ್ಪ 'ಅಂಗಳ' ಪ್ರಥಮ ಸಂಚಿಕೆ ಬಿಡುಗಡೆ ಮಾಡಿ ಶುಭ ಹಾರೈಸಿದರು.

ಈ ನಡುವೆ, ಪಂಡಿತ್ ವೀರಭದ್ರಯ್ಯ ಹಿರೇಮಠ ಅವರ ಮಾರ್ಗದರ್ಶನದಲ್ಲಿ ಪೋಷಕರ ಬಳಗದಿಂದ ಅಲ್ಲಮಪ್ರಭುವಿನ ಐದು ವಚನಗಳ ಗಾಯನ ನಡೆಯಿತು.

**ಅಗಲಗಿವಿಯ ಅರಿವುಗಾರ:** 7ರಿಂದ 9ನೇ ತರಗತಿವರೆಗಿನ ಮಕ್ಕಳು 'ಅಗಲಗಿವಿಯ ಅರಿವುಗಾರ' ನಾಟಕವನ್ನು ಅಭಿನಯಿಸಿದರು. ಮಾನವನ ತೀರದ ದಾಹವನ್ನು ತಣಿಸುವುದಕ್ಕಾಗಿ ಪ್ರಕೃತಿಯಿದೆ ಎಂಬ ಕುವಿಚಾರಧಾರೆಯು ಎಂತಹ ಅನರ್ಥ ಪರಂಪರೆಗಳಿಗೆ ಕಾರಣವಾಗುತ್ತದೆ ಎಂಬುದನ್ನು ಮಕ್ಕಳು ಅತ್ಯಂತ ಶಕ್ತಿಯುತವಾಗಿ, ಭಾವಪೂರ್ಣವಾಗಿ ಅಭಿನಯದೊಂದಿಗೆ ಆಡಿ ತೋರಿಸಿದರು.

ಮೂರೂ ತರಗತಿಗಳ ಎಲ್ಲ ಮಕ್ಕಳೂ ನಾಟಕದಲ್ಲಿ ಅಭಿನಯಿಸುವಂತೆ ಮಾಡಿದ್ದು ನಿರ್ದೇಶಕರಿಗಿದ್ದ ಸವಾಲು ಎಂತಹುದು ಎಂಬುದನ್ನು ಸಾಬೀತುಪಡಿಸುವಂತಿತ್ತು. ನಡು ನಡುವೆ ಕೇಳಿಬಂದ ಹಾಡುಗಳು ನಾಟಕದ ಸಾಂಗತ್ಯವನ್ನು ದಾಟಿಸಲು ಸಮಂಜಸ ಎನಿಸಿತು.

ಇಲ್ಲಿನ 'ಅರಿವುಗಾರ' ಕೆಲವೊಮ್ಮೆ ಸಾಕ್ರೆಟಿಸನಂತೆ, ಕೆಲವೊಮ್ಮೆ ತನ್ನ ಆವಿಷ್ಕಾರಗಳ ದುರ್ಬಳಕೆಯಿಂದ ಆಗಿರುವ ಹಾನಿಗಾಗಿ ಮಮ್ಮಲ ಮರುಗುವ ವಿಜ್ಞಾನಿಯಂತೆ, ಕೆಲವೊಮ್ಮೆ ಭೋಳೆ ಆಸಾಮಿಯಂತೆ ಕಂಡರೆ, ಇನ್ನೂ ಕೆಲವೊಮ್ಮೆ ತನ್ನ ಸಂದೇಶದ ರವಾನೆಯಿಂದ ಜನರಿಗೆ ಬೇಕಿದ್ದನ್ನು ನೀಡಿ ಅವರನ್ನು ತನ್ನೆಡೆ ಸೆಳೆಯುವ ಬಾಬಾನಂತೆ ಕಂಡನು.

ಒಟ್ಟಾರೆ, ಎರಡೂ ನಾಟಕಗಳಲ್ಲಿ ಮಕ್ಕಳು ತಮ್ಮ ವಯಸ್ಸು ಮತ್ತು ಅನುಭವಕ್ಕೂ ಮೀರಿದ ಪ್ರೌಢಿಮೆ ಹಾಗೂ ತಾಕತ್ತು ಪ್ರದರ್ಶನ ಮಾಡಿದರು. ಅಭಿನಯ ಮತ್ತು ಭಾವಾಭಿವ್ಯಕ್ತಿಯ ಮೂಲಕ ಪ್ರೇಕ್ಷಕರ ಮನಸ್ಸನ್ನು ಗೆಲ್ಲುವಲ್ಲಿ ಯಶಸ್ಸು ಕಂಡರು.

## ಸಂಪಾದಕೀಯ

ಆತ್ಮೀಯ ಓದುಗರೆ,
2017–18ನೇ ಸಾಲಿನಲ್ಲಿ ಪ್ರಾರಂಭಿಸಿರುವ ಮಾಸಪತ್ರಿಕೆಯ ಎರಡನೇ ಸಂಚಿಕೆ ಇದಾಗಿದೆ. ಈ ತಿಂಗಳಲ್ಲಿ ನಡೆದ ಶಾಲೆಯ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು ಮನರಂಜನೆಯ ಜೊತೆಗೆ ಹಿತವಾದ ಕಲಿಕೆಯನ್ನು ಶಿಕ್ಷಕರು ಮತ್ತು ಮಕ್ಕಳಿಗೆ ಕಲ್ಪಿಸಿತು. ಕಾರ್ಯಕ್ರಮಗಳು 'ಹೇಗಾದವು?', 'ಏನಾಯಿತು?' ಎಂಬುದನ್ನು ಸಂಚಿಕೆಯಲ್ಲಿ ಸಂಕ್ಷಿಪ್ತವಾಗಿ ಹಂಚಿಕೊಂಡಿದ್ದೇವೆ. ಬರವಣಿಗೆಯಲ್ಲಿ ತೊಡಗಿಸಿಕೊಳ್ಳಲು ಅನುಭವಗಳ ಜೊತೆಗೆ ಓದುಗಾರಿಕೆ ಬಹುಮುಖ್ಯ. ನಿತ್ಯವೂ ಮಕ್ಕಳು ಮತ್ತು ಶಿಕ್ಷಕರು ತಮ್ಮದೇ ಶೈಲಿಯ ಬರವಣಿಗೆಗಳನ್ನು ಹವ್ಯಾಸವಾಗಿ ರೂಢಿಸಿಕೊಳ್ಳುತ್ತಿದ್ದು, ಕಥೆ, ಕವನ, ಪ್ರಬಂಧ ಇತ್ಯಾದಿ ಅಭಿವ್ಯಕ್ತಿ ಕೌಶಲಗಳಿಂದ ತಮ್ಮನ್ನು ತಾವು ತೆರೆದುಕೊಳ್ಳುತ್ತಿದ್ದಾರೆ. ಈ ತೆರೆಯುವಿಕೆಗೆ ವಿಶೇಷವಾಗಿ "ಅಂಗಳ" ಮಾಸಪತ್ರಿಕೆ ಪ್ರೇರಣೆ ಮತ್ತು ಪ್ರೋತ್ಸಾಹ ನೀಡುತ್ತಿರುವುದು ಖುಷಿ ತರುವ ವಿಷಯ. ಅರಿವು ಶಾಲೆಯ ಮಾಸಪತ್ರಿಕೆ "ಅಂಗಳ"ದ ಎರಡನೆಯ ಸಂಚಿಕೆಯನ್ನು ಸಂಪಾದಿಸಲು ಅವಕಾಶ ಮಾಡಿಕೊಟ್ಟ ಆಡಳಿತ ಮಂಡಳಿ ಮತ್ತು ಲೇಖನಗಳನ್ನು ನೀಡಿ ಸಹಕರಿಸಿದ ಸಂಪನ್ಮೂಲ ವ್ಯಕ್ತಿಗಳು, ಶಿಕ್ಷಕರು ಹಾಗೂ ವಿದ್ಯಾರ್ಥಿಗಳಿಗೆ ತುಂಬು ಮನಸ್ಸಿನಿಂದ ಧನ್ಯವಾದ ತಿಳಿಸುತ್ತೇನೆ.



| **ಕಿರಣ್‌ಕುಮಾರ್ ಎಸ್.ಕೆ.ಗಿರ್ಗಿ**
**ಸಂಚಿಕೆ ಸಂಪಾದಕರು**

### ಜುಲೈ ತಿಂಗಳಿನಲ್ಲಿ ಶಾಲೆಗೆ ಭೇಟಿ ನೀಡಿದವರು

1. ಸಂಧ್ಯಾರಾಣಿ– ಶ್ರೀಲಂಕಾ, ಥು ಹ– ವಿಯೆಟ್ನಾಮ್ (ಪತ್ರಿಕೋದ್ಯಮ ವಿದ್ಯಾರ್ಥಿಗಳು, ಮೈಸೂರು ವಿಶ್ವವಿದ್ಯಾಲಯ)
2. ಡಾ. ಪ್ರಫುಲ್ ವಿಜಯ್‌ಕರ್, ಭಾರತದ ಹೆಸರಾಂತ ಹೋಮಿಯೋಪತಿ ವೈದ್ಯರು, ಮುಂಬೈ, ಪ್ರೀತಿ ವಿಜಯ್‌ಕರ್, ಮುಂಬೈ, ಡಾ. ವಿಜಯ ಕೃಷ್ಣ, ಡಾ. ಸುಜನಿ, ಡಾ.ದೇವರಾಜ್, ಡಾ. ರೈನಾ ಹೋಮಿಯೋಪತಿ ವೈದ್ಯರು, ಬೆಂಗಳೂರು.
3. ಡಾ. ಶಿಲ್ಪಾ ಮತ್ತು ಶ್ರೀ.ಎಸ್.ಕೆ. ನಾಗೇಂದ್ರನ್ , ಹಾಸನ

## ಅಂಗಳಾಂತರಂಗ...

### ಸಂತೋಷ, ಹೆಮ್ಮೆ ತಂದಿದೆ

ಅರಿವು ಶಾಲೆಯ ಮಾಸ ಪತ್ರಿಕೆ 'ಅಂಗಳ'ವನ್ನು ಪೂರ್ತಿ ಓದಿದೆ. 15 ವರ್ಷಗಳ ಹಿಂದೆ ನಾವು ಜನಪದ ವಿದ್ಯಾಲಯದಿಂದ ಹೊರತರುತ್ತಿದ್ದ 'ಜನಪದ ದೀಪ' ನೆನಪು ಬಂದಿತು. ಪತ್ರಿಕೆ ಚೆನ್ನಾಗಿ ಬಂದಿದೆ. ದೊಡ್ಡವರ ಮತ್ತು ಮಕ್ಕಳ ಬರಹದ ಹದವಾದ ಮಿಶ್ರಣ ಇದೆ. ಅಮೋಘನ ಬರಹವು ಸುಮನಸ ತನ್ನ ಬಾಲ್ಯದಲ್ಲಿ ಜನಪದ ದೀಪದಲ್ಲಿ ಬರೆದ ಲೇಖನಗಳ ನೆನಪು ತಂದಿತು. ಕೆಲವು ಮಕ್ಕಳ ಬರಹದಲ್ಲಿ ದೊಡ್ಡವರು ಸ್ವಲ್ಪ ಕೈ ಆಡಿಸಿದಂತೆ ತೋರಿತು. ಪ್ರತಿ ಮಾಹೆಯೂ ಪತ್ರಿಕೆಯನ್ನು ಹೊಸ ಹುರುಪಿನಿಂದ ತರುವುದು ಸವಾಲಿನ ಕೆಲಸ. ಆ ಸಾಮರ್ಥ್ಯ ನಿಮಗೆ ಇದೆ. ಹತ್ತು ವರ್ಷಗಳಲ್ಲಿ ಅರಿವು ಎಲ್ಲ ಒತ್ತಡಗಳ ನಡುವೆ ಮಾಡಿರುವ ಸಾಧನೆ ನನಗೆ ಬಹಳ ಸಂತೋಷ ಮತ್ತು ಹೆಮ್ಮೆಯನ್ನು ತಂದಿದೆ.

ಶುಭಾಶಯಗಳು,




| **ಸಂತೋಷ ಕೌಲಗಿ** ಕಾರ್ಯದರ್ಶಿ,
ಜನಪದ ಸೇವಾ ಟ್ರಸ್ಟ್,
ಮೇಲುಕೋಟೆ

### 'ತಲೆ ಬುಡವಿಲ್ಲದ ಕತೆ' ಕುತೂಹಲ

ಪ್ರೀತಿಯ 'ಅರಿವು ಶಾಲೆಯ ಅಂಗಳ' ಪತ್ರಿಕಾ ಬಳಗಕ್ಕೆ ಅಭಿನಂದನೆಗಳು. ಶಿಕ್ಷಕರು, ಮಕ್ಕಳು, ಪಾಲಕರು ಸೇರಿ ಹೊರತಂದಿರುವ ಅಂಗಳಕ್ಕೆ ಶುಭಾಶಯಗಳು. ಅನುಭವ, ಒಳನೋಟ ಆಧರಿಸಿದ ಲೇಖನಗಳು ಇಷ್ಟವಾಗುವಂತಿವೆ. ಪತ್ರಿಕೆಯ ಶೈಕ್ಷಣಿಕ ಆಶಯ ಬಲಗೊಳ್ಳಲು ಚಿಂತನಾತ್ಮಕ ಲೇಖನಗಳು, ಚರ್ಚೆಗಳು, ಸಂವಾದಗಳೂ ಮುಂದಿನ ದಿನಗಳಲ್ಲಿ ಪತ್ರಿಕೆಯ 'ಬೆಲೆ' ಹೆಚ್ಚಿಸುತ್ತವೆ ಎಂಬ ನಿರೀಕ್ಷೆ ಇಟ್ಟುಕೊಂಡಿದ್ದೇನೆ.

ಅಂದಹಾಗೇ, ಬರ್ಟಿ ಅವರಿಗೆ ವಿಶೇಷ ವಿನಂತಿ: 'ತಲೆ ಬುಡವಿಲ್ಲದ ಕತೆ'ಯನ್ನು ಓದುವ/ನೋಡುವ ಕುತೂಹಲವಿದೆ. ವ್ಯವಸ್ಥೆ ಮಾಡುತ್ತೀರಾ?

ನಿಮ್ಮ



| **ಶಿವಾನಂದ ಹೊಂಬಳ**, ಧ್ವನಿ
ಶೈಕ್ಷಣಿಕ ಸಂಪನ್ಮೂಲ ಕೇಂದ್ರ,
ಧಾರವಾಡ

### ಎರಡು ಸಲಹೆ

*'ಮಾಹಿತಿ, ಜ್ಞಾನ, ಸೃಜನಶೀಲತೆಗೊಂದು ವೇದಿಕೆ'ಗೆ ಬದಲು 'ಸೃಜನಶೀಲತೆಗೊಂದು ವೇದಿಕೆ' ಎಂದು ಹೇಳಬಹುದು. ಮಾಹಿತಿ ಮತ್ತು ಜ್ಞಾನ ಅಷ್ಟೊಂದು ಮುಖ್ಯವಲ್ಲ ಎಂಬುದು ನನ್ನ ಅನಿಸಿಕೆ. ಸೃಜನಶೀಲತೆ ಇದ್ದಲ್ಲಿ ಮಾಹಿತಿ ಮತ್ತು ಜ್ಞಾನ ಇದ್ದೇ ಇರುತ್ತದೆ. ಆದರೆ, ಮಾಹಿತಿ ಮತ್ತು ಜ್ಞಾನ ಇದ್ದಲ್ಲಿ ಸೃಜನಶೀಲತೆ ಇರುತ್ತದೆ ಎಂದು ಹೇಳಲಾಗುವುದಿಲ್ಲ!

* ವಿನ್ಯಾಸ ಸ್ವಲ್ಪ ಬದಲಾದರೆ ಒಳ್ಳೆಯದು. ಈಗ ಪಠ್ಯವನ್ನು ತುರುಕಿದಂತಿದೆ. ಸ್ವಲ್ಪ ಖಾಲಿ ಜಾಗ ಬಿಟ್ಟರೆ ಓದಲು ಹಿತಕರವಾಗಿರುತ್ತದೆ.



| **ಮಧುಕರ ಪುಟ್ಟಿ**, ಮೈಸೂರು

# ಗಾಂಧಿವನದಲ್ಲಿ ಪುಟಾಣಿಗಳ ಸಂಭ್ರಮ

ಜುಲೈ 7ನೇ ಶುಕ್ರವಾರದಂದು ಮೈಸೂರಿನ ನಜರ್‌ಬಾದ್ ಗಾಂಧಿವನಕ್ಕೆ ಪೂರ್ವ ಪ್ರಾಥಮಿಕ ಪುಟಾಣಿಗಳನ್ನು ಹೊರ ಸಂಚಾರಕ್ಕಾಗಿ ಕರೆದೊಯ್ಯಲಾಗಿತ್ತು. ಮಕ್ಕಳು ಗಾಂಧಿವನದ ಸುತ್ತಲಿನ ಅಂಶಗಳನ್ನು ಗಮನಿಸಲು ಬಿಟ್ಟು ನಂತರ ಶಿಕ್ಷಕಿಯರಾದ ಸವಿತಾ, ರಶ್ಮಿ, ಸುಧಾ, ಸುಮನಾರವರು ಅದರ ಬಗೆಗೆ ಮಾತನಾಡಿಸಿದರು. ಗಾಂಧಿವನ ಉದ್ಯಾನದಲ್ಲಿಯೇ ಪುಟಾಣಿಗಳು ಆಟ–ಪಾಠ–ಊಟವನ್ನು ಸವಿದು ಖುಷಿಯಿಂದಿದ್ದರು.








**ಆರೆಮ್ಮೆನ್ನೆಚ್‌ನಲ್ಲಿ ಕಥೆ, ಹಾಸ್ಯದೊಂದಿಗೆ ಪ್ರಕೃತಿ ಪಾಠ:** ದಕ್ಷಿಣ ಭಾರತದ ಭೂ ಮೇಲ್ಮೈ ವ್ಯವಸ್ಥೆಯ ಕಾಡಿನಲ್ಲಿರುವ ಪ್ರಾಣಿ–ಪಕ್ಷಿಗಳ ಬಗೆಗಿನ ವಿಷಯ ಸಂಗ್ರಹ ಮತ್ತು ಹಂಚಿಕೆಯ ಉದ್ದೇಶ ಹೊಂದಿರುವ ಮೈಸೂರಿನ ಆರೆಮ್ಮೆನ್ನೆಚ್ (Regional Museum of Natural History)ಗೆ ಶಾಲೆಯ 4, 5 ಮತ್ತು 6ನೇ ತರಗತಿ ಮಕ್ಕಳು ಶಿಕ್ಷಕರಾದ ರಮೇಶ್, ಸುಮಾ ಹಾಗೂ ಸಂಪನ್ಮೂಲ ವ್ಯಕ್ತಿಯಾಗಿರುವ ಸಹನಾ ಅವರೊಂದಿಗೆ ಜುಲೈ 21ರಂದು ಭೇಟಿ ಕೊಟ್ಟಿದ್ದರು. ಅಲ್ಲಿನ ಸಂಪನ್ಮೂಲ ವ್ಯಕ್ತಿಯಾಗಿರುವ ಡಾ. ಶ್ರೀನಿವಾಸ್‌ರವರು ಮೈಸೂರು ಹಾಗೂ ಭಾರತದಲ್ಲಿ ಕಣ್ಮರೆಯಾಗಿರುವ ಜೀವಿಗಳ ಕುರಿತು, ಚರ್ಮದಿಂದ ಮಾಡಿದ ಪ್ರಾಣಿಗಳ ಮಾದರಿ(Stuffed)ಗಳನ್ನು ತೋರಿಸುತ್ತಾ ಕಥಾರೂಪದಲ್ಲಿ ಮತ್ತು ಹಾಸ್ಯದೊಂದಿಗೆ ಹಲವು ವಿಚಾರಗಳನ್ನು ಹಂಚಿಕೊಂಡರು. ಮಕ್ಕಳೂ ಅವರೊಂದಿಗೆ ತುಂಬಾ ಆತ್ಮೀಯವಾಗಿ ವಿಷಯಗಳನ್ನು ಚರ್ಚಿಸಿದರು.

**ಜಾನಪದ ವಸ್ತುಸಂಗ್ರಹಾಲಯವೆಂಬ ಬೆರಗು:** ಜುಲೈ 3ರಂದು 5 ಮತ್ತು 6ನೇ ತರಗತಿ ಮಕ್ಕಳು ಶಿಕ್ಷಕಿಯರಾದ ದಿವ್ಯಶ್ರೀ ಮತ್ತು ಸುಮನಾ ಅವರ ಜತೆ ಮೈಸೂರಿನ ಜಾನಪದ ವಸ್ತುಸಂಗ್ರಹಾಲಯಕ್ಕೆ ಭೇಟಿ ನೀಡಿದ್ದರು. ಸಂಗ್ರಹಾಲಯವು ಜಯಲಕ್ಷ್ಮೀ ಅಮ್ಮಣ್ಣಿ ಎಂದು ತಿಳಿದು ಮಕ್ಕಳು ಖುಷಿಪಟ್ಟರು. ಮೈಸೂರು ಮಹಾರಾಜರು ಬೇಟೆಯಾಡಿದ ಹುಲಿಯ ಮಾದರಿ, ರಾಣಿಯರ ಅಂತಃಪುರದ ಮೇಲ್ಹಾವಣಿ, ಮಾವಿನ ಮರದಿಂದ ಮಾಡಿದ ದೋಣಿ, ಯಕ್ಷಗಾನದ ವಸ್ತ್ರಾಭರಣಗಳು, ಯುದ್ಧಕ್ಕೆ ಬಳಸುತ್ತಿದ್ದ ಶಸ್ತ್ರಾಸ್ತ್ರಗಳು ಮಕ್ಕಳನ್ನು ಆಕರ್ಷಿಸಿದವು. ನಾಡಿನ ಪ್ರಖ್ಯಾತ ಕವಿ, ಲೇಖಕರಿಗೆ ಸಂಬಂಧಿಸಿದ ವಸ್ತುಗಳನ್ನು ಸಂಗ್ರಹಿಸಿಡಲಾಗಿತ್ತು. ಇವೆಲ್ಲ ವಸ್ತುಗಳನ್ನು ಬೆರಗಿನಿಂದ ವೀಕ್ಷಿಸಿದರು. ಮಕ್ಕಳೆಲ್ಲರೂ ಅಲ್ಲಿನ ಸಿಬ್ಬಂದಿ ವರ್ಗದವರಿಗೆ ತಮ್ಮ ಅಭಿಪ್ರಾಯ ಮತ್ತು ವಂದನೆಗಳನ್ನು ತಿಳಿಸಿ ಶಾಲೆಗೆ ಹಿಂದಿರುಗಿದರು.

## ಸೂರ್ಯನ ಹೂಲಾ ಹೂಪ್ ಆಟ

'ಹೇ ಕಾಮನಬಿಲ್ಲು...!!', 'ಎಲ್ಲಿ?', 'ಅಲ್ನೋಡೋ...' ಹೀಗೆ ಕೂಗುಗಳು ಕೇಳಿ ಬರುತ್ತಿದ್ದಂತೆ ಇಡೀ ಶಾಲೆ ಆವರಣದಲ್ಲಿ ನೆರೆದಿತ್ತು. ಅತ್ತ–ಇತ್ತ ಕತ್ತು ಕೊಂಕಿಸಿದರೂ ಎಲ್ಲೂ ಕಾಣದು. ಆಕಾಶದತ್ತ ಲಂಬವಾಗಿ ಚಾಚಿದ ಕೈಯನ್ನೇ ಅನುಸರಿಸಿದಾಗ ಕಂಡದ್ದನ್ನು ಮಟಮಟ ಮಧ್ಯಾಹ್ನದ ಸೂರ್ಯನ ಕಿರಣಗಳು ನೋಡಲು ಬಿಡಲೊಲ್ಲದು. ಆದರೂ ಕಣ್ಣನ್ನು ಕಿರಿದು ಮಾಡಿ, ಕೈ ಅಡ್ಡ ಮಾಡಿ, ತಲೆಯೆತ್ತಿ ನೋಡಿದಾಗ..... ಕಾಮನಬಿಲ್ಲನ್ನು ವೃತ್ತಾಕಾರದಲ್ಲಿ ಸುತ್ತಿ ಸೂರ್ಯನನ್ನು ಕೇಂದ್ರವನ್ನಾಗಿ ಮಾಡಿ ಇಟ್ಟಂತಿದ್ದ ಮನೋಹರ ದೃಶ್ಯ. ಕಣ್ಣಲ್ಲಿ, ಕ್ಯಾಮರಾದಲ್ಲಿ ತುಂಬಿಕೊಳ್ಳುವುದರಲ್ಲಿ ಎಲ್ಲರೂ ಮಗ್ನ. 'ಅದು ಕಾಮನಬಿಲ್ಲಾ?', 'ಹೌದು', 'ಇರಬಹುದು' ಇತ್ಯಾದಿ ಜಿಜ್ಞಾಸೆ ನಡೆದಿತ್ತು. ನಂತರದಲ್ಲಿ ತಿಳಿದದ್ದು ಅದು ಕಾಮನ ಬಿಲ್ಲಲ್ಲ, ಅದನ್ನ 'ಹೇಲೋ' ಅಂತ ಕರೀತಾರೆ ಅಂತ.

ಅಂದ ಹಾಗೆ, ನಮ್ಮ ಮಕ್ಕಳಿಗೆ 'ಸೂರ್ಯ ಹೂಲಾ ಹೂಪ್ ಆಡ್ತಾ ಇದಾನೆ!' ಅಂತ ಅನ್ನಿದ್ದು ಹೌದು – ಅವರ ಅಗಾಧ ಕಲ್ಪನಾ ಸಾಮರ್ಥ್ಯಕ್ಕೆ ಅದು ಸಾಕ್ಷಿ ಅಲ್ವೇ?!




| ಸುಮನಾ, ಶಿಕ್ಷಕಿ

## ಸೈಕಲ್‌ನಿಂದ ಬಿದ್ದು ಕಲಿತ ಮೂರು ಪಾಠಗಳು

ಅಂದು ಶುಕ್ರವಾರ, ನನ್ನ ಅಮ್ಮ, 'ಬಾ ಪ್ರೀತಮ್, ಇಂದು ನಿನ್ನ ಶಾಲೆಗೆ ರಜೆ ಹಾಕಿ ನಮ್ಮ ಸಂಬಂಧಿಕರ ಮದುವೆಗೆ ಹೋಗಿ ಬರುವ' ಎಂದಿದ್ದರು. ಆದರೆ ನಾನು ಅದನ್ನು ಒಪ್ಪದೆಯೇ ಗೆಳೆಯ ಧವಳಚಂದ್ರನ ಜತೆ ಸೈಕಲ್‌ನಲ್ಲಿ ಶಾಲೆಗೆ ಹೊರಟಿದ್ದೆ. ಪ್ರೀತಿ ಬಡಾವಣೆಯ ಸಮೀಪ ಹೋಗುತ್ತ ದಾರಿಯಲ್ಲಿ ಮತ್ತೊಬ್ಬ ಗೆಳೆಯ ಪ್ರಣವ್‌ನನ್ನು ಕರೆದೊಯ್ಯೋಣವೆಂದು ಯೋಚಿಸಿದ್ದೆವು.

ಹಾಗೆ ಯಾವ್ಯಾವುದೋ ವಿಷಯ ಮಾತನಾಡುತ್ತಾ ಹೋಗುತ್ತಿದ್ದಾಗ ಒಂದು ದೊಡ್ಡ ಕಾರು ಎದುರು ಬಂದಿತು. ಆಗ ನನ್ನ ಬಲಭಾಗದಲ್ಲಿದ್ದ ಧವಳ ಮುಂದಕ್ಕೆ ಹೋದ, ನಾನು ಹಿಂದುಳಿದೆ. ಕಾರು ಪಾಸ್ ಆದ ನಂತರ ಮತ್ತೆ ಮಾತನಾಡಲು ಧವಳ ನನ್ನ ಪಕ್ಕಕ್ಕೆ ಬರುವ ಆ ಕ್ಷಣದಲ್ಲಿ ನನ್ನ ಸೈಕಲ್‌ನ ಮುಂದಿನ ಚಕ್ರ ಅವನ ಸೈಕಲ್ ಪೆಡಲ್‌ಗೆ ಸಿಲುಕಿಕೊಂಡಿತು. ನನ್ನ ಸೈಕಲ್ ಹ್ಯಾಂಡಲ್ ಎಡಕ್ಕೆ ತಿರುಗಿತು. ತಕ್ಷಣ ನಾನು ಕೆಳಗೆ ಬಿದ್ದೆ. ಆಗ ನನ್ನ ಬಳಿ ಹೆಲ್ಮೆಟ್ ಇರಲಿಲ್ಲ. ಆದ್ದರಿಂದ ನನ್ನ ತಲೆಗೆ ಸ್ವಲ್ಪ ಪೆಟ್ಟಾಯಿತು. ಅದೃಷ್ಟವಶಾತ್ ಧವಳನಿಗೆ ಏನೂ ಆಗಲಿಲ್ಲ. ತಕ್ಷಣ ಧವಳ, 'ಬೇಗ ಪ್ರಣವ್‌ನ ಮನೆಗೆ ಹೋಗು' ಎಂದು ತನ್ನ ಸೈಕಲ್ ಅನ್ನು ನನಗೆ ನೀಡಿದ. ಅವನು ನನ್ನ ಸೈಕಲ್ ಅನ್ನು ಬೇಗನೆ ತಳ್ಳಿಕೊಂಡು ಪ್ರಣವ್‌ನ ಮನೆಗೆ ಬಂದ. ನೋಡಿದರೆ, ಮನೆಯಲ್ಲಿ ಪ್ರಣವ್ ಬಿಟ್ಟರೆ ಬೇರೆ ಯಾರೂ ಇರಲಿಲ್ಲ. ತಕ್ಷಣ ನಾವು ಮೂವರು ಅಲ್ಲೇ ಹತ್ತಿರವಿದ್ದ ಮತ್ತೊಬ್ಬ ಗೆಳೆಯ ಮನವ್‌ನ ಮನೆಗೆ ಹೋದೆವು. ಆಗ ಅವರ ಅಮ್ಮ ನನಗೆ ಔಷಧ ನೀಡಿದರು. ನನ್ನ ಸ್ನೇಹಿತರಿಬ್ಬರನ್ನು ಶಾಲೆಗೆ ಹೋಗಿ ಎಂದರು. ನನ್ನ ಅಪ್ಪನಿಗೆ ಕರೆ ಮಾಡಿ ವಿಷಯ ತಿಳಿಸಿದರು. ಇತ್ತ ಸ್ನೇಹಿತರಿಬ್ಬರು ಶಾಲೆಗೆ ಹೋಗಿ ನಡೆದ ಘಟನೆಯನ್ನು ಹೇಳಿದ್ದಾರೆ. ನಮ್ಮ ಮನೆಯಿಂದ ನಮ್ಮ ಅಪ್ಪ, ಶಾಲೆಯಿಂದ ಕುಶಲ್ ಅಣ್ಣ ನನ್ನನ್ನು ನೋಡಲು ಬಂದರು. ಇಬ್ಬರೂ ಸೇರಿ ಆಸ್ಪತ್ರೆಗೆ ಕರೆದೊಯ್ದು ಚಿಕಿತ್ಸೆ ಕೊಡಿಸಿದರು.

ಈ ಘಟನೆಯಾದ ಕೆಲವು ದಿನಗಳ ನಂತರ ಅಪ್ಪ ನನಗೊಂದು ಹೆಲ್ಮೆಟ್ ಕೊಡಿಸಿದರು. ಈ ಘಟನೆಯಿಂದ ನನಗೆ ಮೂರು ವಿಷಯಗಳು ಮನವರಿಕೆಯಾದವು. 1.ದೊಡ್ಡವರ ಮಾತು ಕೇಳಬೇಕು. 2.ಸ್ನೇಹಿತರ ಬೆಲೆ ತುಂಬಾ ಅಮೂಲ್ಯ. 3.ಸೈಕಲ್ ಓಡಿಸುವಾಗ ಹೆಲ್ಮೆಟ್ ಧರಿಸಬೇಕು.



| ಎಂ.ಆರ್.ಪ್ರೀತಮ್ 7ನೇ ತರಗತಿ


## ನಿನ್ನ ನೆನಪು

ಉರಿಯುತ್ತಿರುವ
ದೀಪವೇ
ನನ್ನ ಕಣ್ಣ ಅಂಚಲ್ಲಿ
ಬೆಂಕಿಯ
ಹೊಂಬೆಳಕು

ಕರಗುತ್ತಿರುವ ಮೋಡವೇ
ನಿನ್ನ
ಸಣ್ಣ ಹನಿಯಲ್ಲೂ
ಕೂತಿದೆ
ನೇಸರನ ಹೊಳಪು

ಉಸಿರ ಬಿಗಿ ಹಿಡಿದು
ಹೃದಯ ಹೊರ ತೆಗೆದು
ಮಡಿದರೂ
ಮರೆಯಲಾಗದು
ನಿನ್ನ ನೆನಪು!

| ಸಾಗರ್ 9ನೇ ತರಗತಿ



## ನನ್ನ 'ತಲೆನೋವು' ಅಮ್ಮನಿಗೆ ದಾಟಿಸಿಬಿಟ್ಟೆ!



(ಕನ್ನಡ ಕಾರ್ಯಾಗಾರದಲ್ಲಿ ರಚಿತವಾದ ಪುಟ್ಟ ಪ್ರಬಂಧ)

ಬೆಳಗ್ಗೆ ಎದ್ದರೆ ಸಾಕು, ನನಗೆ ಒಂದು ದೊಡ್ಡ ತಲೆನೋವು. ಏನಪ್ಪಾ ಅಂದ್ರೆ, ನಾನು ಯಾವ ಬಟ್ಟೆ ಹಾಕಿಕೊಳ್ಳಲಿ ಅಂತಾನೆ ಗೊತ್ತಾಗೊಲ್ಲ. ಎಲ್ಲ ಬಟ್ಟೆಗಳೂ ನನ್ನನ್ನ ಆಕರ್ಷಿಸುತ್ವೆ. ನಾನು ಯಾವ ಬಟ್ಟೆ ಹಾಕಿಕೊಳ್ಳಲಿ ಅಂತ ಯೋಚಿಸುತ್ತಿರುತ್ತೇನೆ. ನಾನು ಒಂದು ಬಟ್ಟೆ ಎತ್ತಿಕೊಂಡರೆ ಸಾಕು, ಇನ್ನೊಂದು ಬಟ್ಟೆ, 'ನನ್ನನ್ನ ಹಾಕೊಳ್ಳೇ' ಎನ್ನುತ್ತೆ. ಅದಕ್ಕೆ ಒಂದು ಉಪಾಯ ಕಂಡುಹಿಡಿದಿದ್ದೀನಿ. ಏನಪ್ಪಾ ಅಂದ್ರೆ, 'ನನಗೆ ಬೆಳಗ್ಗೆ ನೀನೆ ಬಟ್ಟೆಯನ್ನು ಕೊಡು' ಅಂತ ಅಮ್ಮನಿಗೆ ಜವಾಬ್ದಾರಿ ಕೊಟ್ಟಿದ್ದೇನೆ. ಅಬ್ಬಾ...! ಅಂತೂ ಒಂದು ತಲೆನೋವು ಹೋಯ್ತು ಅಂತ ಆವಾಗಾವಾಗ ಅಂದ್ಕೊಳ್ತಿರ್ತೀನಿ. | ಸರಸ್ವತಿ ಎಸ್., 5ನೇ ತರಗತಿ



## ನಿಮಗಿದು ಗೊತ್ತೇ?

ಇದು ಬಹಳ ಹಿಂದಿನ ಕಥೆ. ಜನಪದರ ನಂಬಿಕೆಯ ಕಥೆ. ಇದು ನಿಮಗೆ ತಿಳಿದಿದೆಯೇ?

**ಹಿಂದೆ ಆಕಾಶ ಬಹಳ ಕೆಳಗೆ ಇತ್ತಂತೆ..!**

| ನಯ, 1ನೇ ತರಗತಿ

## ಭಾರತಮಾತೆಯ ಶಾಪ!

ಒಂದು ಊರಿನಲ್ಲಿ ಒಬ್ಬ ಹುಡುಗನಿದ್ದನು. ಅವನ ಮನೆಯ ಅಕ್ಕಪಕ್ಕದವರೆಲ್ಲ ಸೇರಿ ಸ್ವಾತಂತ್ರ್ಯ ದಿನವನ್ನು ಆಚರಿಸುತ್ತಿದ್ದರು. ಆದರೆ ಹುಡುಗ ಸ್ವಾತಂತ್ರ್ಯ ದಿನಾಚರಣೆಯಲ್ಲಿ ಭಾಗವಹಿಸದೆ ಆಟ ಆಡಲು ಹೋದನು. ಇದರಿಂದ ಕೋಪಗೊಂಡ ಭಾರತಮಾತೆ ಆ ಹುಡುಗನಿಗೆ 'ನೀನು ಯಾವಾಗಲೂ ಬೇಜಾರಾಗಿರು' ಎಂದು ಶಾಪ ಕೊಟ್ಟಳು. ಶಾಲೆಗೆ ಹೋದಾಗ ಸ್ನೇಹಿತರು 'ಯಾಕೆ, ಬೇಜಾರಾಗಿದ್ದೀಯ' ಎಂದು ಕೇಳಿದರು. ಆದರೆ ಅವನು ಏನೂ ಮಾತನಾಡದೆ ಸುಮ್ಮನಿದ್ದನು. ಶಾಲೆಯಲ್ಲೂ ಸ್ವಾತಂತ್ರ್ಯ ದಿನಾಚರಣೆ ಪ್ರಯುಕ್ತ ಹಾಡು, ನಾಟಕ ಮುಂತಾದ ಕಾರ್ಯಕ್ರಮಗಳು ನಡೆಯುತ್ತಿದ್ದವು. ಆದರೆ ಈ ಹುಡುಗ ಯಾವುದರಲ್ಲೂ ಭಾಗವಹಿಸದೆ ಬೇಜಾರಾಗಿ ಕುಳಿತಿದ್ದನು. ಸಂಜೆ ಮನೆಗೆ ಹೋಗುವ ದಾರಿಯಲ್ಲಿ ಬಾವುಟ ವನ್ನು ನೋಡಿ ವಂದಿಸಿದನು. ಆಗ ಸಂತೋಷ ಗೊಂಡ ಭಾರತ ಮಾತೆ ಶಾಪ ವನ್ನು ಹಿಂತೆಗೆದು ಕೊಂಡಳು. ಅಂದಿನಿಂದ ಹುಡುಗ ಎಲ್ಲರ ಜತೆ ಸಂತೋಷದಿಂದ ಇದ್ದನು.



| ಸ್ನೇಹ ಜಿ., 4ನೇ ತರಗತಿ

## ಮೋಡದ ಬಣ್ಣ ಮುಗಿದುಹೋದ ಕತೆ



ಒಂದಾನೊಂದು ಕಾಲದಲ್ಲಿ ಆಕಾಶದಲ್ಲಿ ಸೂರ್ಯ ಮಾತ್ರ ಇದ್ದ. ಒಂದು ದಿನ ಸೂರ್ಯ ತುಂಬಾ ಸಂತೋಷದಿಂದ ಏನನ್ನಾದರೂ ಸೃಷ್ಟಿ ಮಾಡಬೇಕೆಂದು ಯೋಚಿಸಿದ. ಆಗ ಆಕಾಶದೊಂದಿಗೆ ಸೇರಿ ಭೂಮಿ ಹಾಗೂ ಬಣ್ಣ ಬಣ್ಣದ ಮೋಡಗಳನ್ನು ಸೃಷ್ಟಿಸಿದ. ಭೂಮಿಯ ತುಂಬಾ ಗಿಡ, ಮರ, ಹೂ, ಹಕ್ಕಿ, ಪ್ರಾಣಿಗಳನ್ನು ಸೃಷ್ಟಿಸಿದ. ಆದರೆ ಅವೆಲ್ಲ ಬೆಳ್ಳಗಿದ್ದವು. ಇದನ್ನೆಲ್ಲ ನೋಡಿ ಮೋಡಕ್ಕೂ ತಾನು ಏನಾದರೂ ಮಾಡಬೇಕೆನ್ನಿಸಿತು. ಅದೂ ಸೂರ್ಯನೊಂದಿಗೆ ಸೇರಿ ನೀರನ್ನು ಸೃಷ್ಟಿಸಿತು. ಜತೆಗೆ, ತನ್ನಲ್ಲಿದ್ದ ಬಣ್ಣವನ್ನು ಭೂಮಿಗೆ ಹಂಚಿತು. ಆಗ ಭೂಮಿ ಬಣ್ಣ ಬಣ್ಣದ ಹೂ, ಗಿಡ ಮರ, ಹಕ್ಕಿ, ಪ್ರಾಣಿಗಳಿಂದ ಕಂಗೊಳಿಸತೊಡಗಿತು.

ಇನ್ನು ತನ್ನಲ್ಲಿ ಉಳಿದಿದ್ದ ಬಣ್ಣಗಳನ್ನೆಲ್ಲ ಸೇರಿಸಿ ಕಾಮನಬಿಲ್ಲನ್ನೂ ಮಾಡಿತು. ಇಷ್ಟು ಮಾಡುವಷ್ಟರಲ್ಲಿ ಮೋಡದಲ್ಲಿದ್ದ ಬಣ್ಣವೆಲ್ಲ ಮುಗಿದು ಹೋಗಿ ಬಿಳಿಯ ಬಣ್ಣದ ಮೋಡ ಆಯಿತು.



| ಆಕಾಂಕ್ಷಾ, 5ನೇ ತರಗತಿ

## Experience

We were going on a trip to Kukke Subramanya with our friends,as it was a long week end. An incident happened there, which I would like to share with you



First we had to go to Hassan by train and then to Kukke Subramanya. We came by our car to the Mysore railway station. My parents went to park our car. My aunt, uncle, grandparents, two brothers and myself, we all walked quickly and came to the 6th platform. No trouble of buying tickets because one of our friend had already bought tickets for us. The train we had to catch was standing in the 6th platform. Departure time:6.30. Train name: Sharavathi express. This information was already given to me by my mother. We got inside and we saw people getting off the train in the 6th platform and rushing towards the 5th platform. We got confused. Which train should we get on to??? Then I happened to asked a coolie. He said that in a short time the Hassan train would be leaving the 5th platform. Listening to the word Hassan we all panicked. If we missed the train, it was as good as missing the Subramanya train. So we all rushed and got to platform 5. The train was already crowded. We got into a compartment. Very few seats were left there. My mother was telephoned. She joined us in a couple of minutes. Yet my father hadn't come. We passed through few minutes of anxiety and fear. At last my father joined us. The train started to move. We all sat peacefully, sighing and thinking that all was well,without knowing that a bigger problem was ahead of us.

Then my father called our friend and asked in which compartment they were in. They said they were near the engine. Mom and Dad started searching. They searched and searched but couldn't find their friends. Again we all got nervous and panicked. The tickets were not in our hands. Actually we were afraid of the T.T. If we were caught, the fine money would be 8times (8 people travelling) more. My father called his friend and talked. Dad said that the train in which his friend was travelling hadn't yet left the station. We were all shocked. I was horrified. I was the one who had said this was the Hassan train. Everybody had listened to me. I had caused a great disaster. My father asked a passenger what the train name was. He said it was Talguppa express. Now we were in a great mess. As I said before we were supposed to travel in the Sharavati express. My parents were worried. Once again dad asked the same passenger if the train we were on would go to a place same as the Sharavathi express. He said that both the trains go via K.R Nagar. We were all relieved and glad that there was another way to get on the Sharavathi express. K.R Nagar was half an hour away from Mysuru. K.R Nagar arrived. We all got down thanking our stars as T.T hadn't come. The Talguppa express left the beautiful K.R Nagar station filled with thick black smoke. What a pity!!!!

The station was isolated. This was around 7.15 am. The air was fresh and new. The birds sang melodiously. I loved the serenity of the place. After all the hurry, I felt very exhausted. My body weighed like a ton. I sat on a nearby bench. My eyes were getting foggy, my mind was lost in thoughts, I was just about to fall in a slumber when the Sharavathi express arrived whistling loudly penetrating through the thick black smoke mixed with white fog. I was fully awake again. I cursed the train for spoiling my early morning nap. The train stopped and let out big whoooosh. Very few people got down. We all hopped onto the train and found our friends. At last after a big mishap we were together.



**| Adithi G.Rao**, 9th std

## Might is not always right!!!

I am writing this article on eve of left hander's day-August 13th. I am by birth a south paw (left hander). I do all things with my left hand like eating, writing, etc., When I was in the nursery my teacher was forcing me to eat in right hand. But I could hardly hold a spoon or pencil. Then my grandpa told that teacher not to force, as per doctor's advice.

When I was in 4th and 5th my friends and teachers used to avoid me and tease me because I eat with the left hand. So this made me dull in studies and I was in depression. I was not completing the notes and I was labeled as lazy. My relatives also forced me to eat in right hand. They were of the opinion that eating with left hand is unpure. And also in temples, priests were not giving me the thirtha (holy water), as I used to stretch my left palm. From all this I was feeling like, I am in a jail.

I feel happy that my parents understood and stood by me in those difficult times. My father changed my school. The new school was Arivu. Initially I was afraid, what if this new school also behaved like the old one? But I was happy that My teachers and friends encouraged me. "Arivu" a temple for me gave real blessing that is CONFIDENCE. Confidence of being myself!!

Even today one question bothers me. I know majority of people are right handers, but why do they force their ways on us-left handers???

So might is not always right!

HAPPY LEFT HANDERS DAY!!!



**| Niharika D.** 8th standard

## चीटियाँ

मैंने चीटियों के बारे में बी. रेवती नंदन का लिखा हुआ एक पुस्तक पढ़ा था. मुझे उस पुस्तक में चींटियों के जीवन शैली बहुत विभिन्न लगा. उन में से थोड़े विचार बाँट रही हूँ.

आश्चर्यचकित विषय

चीटियों में तीन प्रकार ; रानी , नर [ male] और सैनिक.
तीनो अलग - अलग काम करते है.
रानी के बिना चीटियों की आबादी बन ही नहीं सकता.
रानी अंडा देकर चीटियों की आबादी बढाती है.
नर चीटी चीटियों के समाज में सैनिक चीटियों के सामान होती हैं.
हर चीटियों के समूह में रानी चीटी होती है
चीटियाँ सजाने के लिए घर के अन्दर शिलीन्द्र बनाती है.
चीटियों के समाज में ज़ख्मी चीटियों को जीवित रहेने नहीं देती.
चीटियों को बारिश आने की सूचना मूंछो से पता चल जाता है.
इकोफिल्ला एक समूह के चींटी अपने घर को पत्तो से बनाते है, उन पत्तो को अपने ककून से जोड़ते है .
जैसे मनुष्य दूध के लिए गाय पलते है वैसे चीटियाँ मीठा द्रव्य देने वाले कीड़े पालते है.
चीटियाँ लगभग 15 से 20 साल तक जीवित रहता है.



**| मेघा एस. 8 वी कक्षा**



## TREE

I think that I shall never see
A poem as lovely as a Tree
A tree whose hungry mouth is best
Against the earth's sweet flowing breast
A tree that looks at God all day
And lifts her leafy arms to pray
A tree that may in summer wear
A nest of robins in her hair
Upon whose bosom snow has lain;
who intimately lives with rain

**| Shrivalli**, 9th std.